2

# ಸಭೆಯು ಏನಾಗಿರುವದಿಲ್ಲ

*"ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷ ಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹ ಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿ ಸುತ್ತೇನೆ. ನಾನು ಸಭೆಗೆ ಸೇವಕನಾದೆನು. ದೇವರು ತನ್ನ ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ ಕೆಲಸವನ್ನು ನಿಮ್ಮ ಪ್ರಯೋಜನಕ್ಕೋಸ್ಕರ ನನಗೆ ದಯಪಾಲಿಸಿದನು - ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು. ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ. ಅನ್ಯ ಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು, ... ನಾವು ಆತನನ್ನು ಪ್ರಸಿದ್ಧಿ ಪಡಿಸುವ ವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನೂ ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ" (ಕೊಲಸ್ಸೆ 1:24-28).*

ಸುಮಾರು ಆರು ವರ್ಷಗಳ ಹಿಂದೆ, ನನ್ನ ಪ್ರೀತಿಯ ಒಬ್ಬ ಸ್ನೇಹಿತನು ಕ್ರೈಸ್ತನಾದನು. ಯುವಕನಾಗಿದ್ದಾಗ ಅವನು ಕ್ರಿಸ್ತನ ಕಡೆಗೆ ಮಾರ್ಪಾಟು ಹೊಂದಲು, ಒಂದು ಕ್ರೈಸ್ತ ಮನೆಯಲ್ಲಿ ಬೆಳೆಯಲು ಮತ್ತು ತನ್ನ ದಶಕದ ವಿರ್ಷಗಳಲ್ಲಿ ಕ್ರೈಸ್ತ ಸ್ನೇಹಿತರಿಂದ ಪ್ರೋತ್ಸಾಹ ಹೊಂದಿಕೊಳ್ಳುವ ಲಾಭಗಲು ಅವನಿಗಿರಲಿಲ್ಲ, ಅವನು ತನ್ನ ಮೂವತ್ತು ವರ್ಷಗಳ ಕೊನೆಯಲ್ಲಿ ಕ್ರಿಸ್ತನ ಬಳಿಗೆ ಬಂದದ್ದರಿಂದ, ಕಳೆದುಹೋದ ಸಮಯಕ್ಕಾಗಿ ತುಂಬಿಕೊಡಬೇಕೆಂಬುದನ್ನು ಅವನು ತಿಳಿದಿದ್ದನು. ನಾನು ತಿಳಿದ ಇತರ ಯಾವುದೆ ಮನುಷ್ಯನಿಗಿಂತ ಹೆಚ್ಚು ಬೇಗನೇ ಈ ಮನುಷ್ಯನು ಆತ್ಮೀಕವಾಗಿ ಬೆಳೆದನು. ಉಳಿದ ನಮ್ಮೊಂದಿಗಿರುವಂತೆ, ಒಬ್ಬ ಶಿಶುವಿನಂತೆ ಅಲ್ಲ ಆದರೆ ದೇವರ ರಾಜ್ಯದೊಳಗೆ "ಪೂರ್ಣವಾಗಿ ಬೆಳೆದವನಾಗಿ" ಜನಿಸಿದಂತೆ ಇದು ಇರುತ್ತದೆ. ಆತ್ಮಿಕ ಪ್ರಶ್ನೆಗಳಲ್ಲಿ ಅವನ ಅಂತರ್ ದೃಷ್ಟಿಗಳು ಯಾವಾಗಲೂ ಸಹಾಯಕವಾದವುಗಳೂ ಮತ್ತು ವ್ಯವಹಾರ ಜ್ಞಾನದ ವ್ಯಕ್ತಪಡಿಸುವಿಕೆಗಳೂ ಆಗಿರುತ್ತವೆ. ನಮಗಿದ್ದ ಒಂದು ಸಂಭಾಷಣೆಯಲ್ಲಿ, ನನ್ನೊಳಗಿದ್ದ ಸಭೆಯ ಬಗೆಗಿನ ಒಂದು ಅಭಿಪ್ರಾಯವನ್ನು ಹೇಳಿದನು. ಕ್ರೈಸ್ತರು ಸಭೆಯ ಬಗ್ಗೆ ಕ್ರೈಸ್ತರಲ್ಲದವರಿಗೆ ಏನು ಹೇಳಬೇಕೆಂದು ನಾನು ಅವನನ್ನು ಕೇಳಿದ್ದೇನು, "ಸಭೆಯು ಏನಾಗಿರುವುದಿಲ್ಲಾ ಎಂಬುದನ್ನು ಹೇಳಲಿ. ಹೊಸ ಒಡಂಬಡಿಕೆಯನ್ನು ತಿಳಿದುಕೊಳ್ಳಲು ನನಗೆ ಸಹಾಯ ಮಾಡಿದ್ದು, ಸಭೆಯು ಏನಾಗಿರುವದಿಲ್ಲ ಎಂಬುದರ ಕಡೆಗೆ ನೋಡಿ ದ್ದಾಗಿರುತ್ತದೆ" ಎಂದು ಅವನು ಹೇಳಿದನು. ಈ ಸಹೋದರನು ಒಳ್ಳೆಯ ಬುದ್ಧಿವಾದ ವನ್ನು ಕೊಟ್ಟಿರುವನೆಂದು ನಾನು ನಂಬುತ್ತೇನೆ.

ಹೋಗಲಿಕೆಗಳು ಮತ್ತು ಸಾಧೃಶ್ಯಗಳು ವಿಶ್ಲೇಷಿಸುವುದಕ್ಕೆ ಮತ್ತು ಒಂದು ವಿಷಯದ ಮುಖಾಂತರ ಕಾರ್ಯಮಾಡುವದಕ್ಕೆ ಅತ್ಯುತ್ತಮ ಮಾರ್ಗಗಳಾಗಿರುತ್ತವೆ. ದೇವರ ಸತ್ಯವು ತಪ್ಪಿನ ಪಕ್ಕದಲ್ಲಿಡಲ್ಪಟ್ಟು ಮತ್ತು ಅದರೊಂದಿಗೆ ಹೋಲಿಸಲ್ಪಡುವಾಗ ಬಹಳ ಸಲ ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತದೆ, ಯೇಸುವು ಈ ಬೋಧಿಸುವ ವಿಧಾನವನ್ನು ಮತ್ತಾಯ 23ರಲ್ಲಿ, ತನ್ನ ಶಿಷ್ಯರು ಏನನ್ನು ಮಾಡಬಾರದೆಂದು ಫರಿಸಾಯರ ಮತ್ತು ಶಾಸ್ತ್ರಿಗಳ ಉದಾಹರಣೆಗಳನ್ನು ತೋರಿಸಿದಾಗ ಉಪಯೋಗಿಸಿದನು, "ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದುದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೆ ಹೊರತು ನಡೆಯುವದಿಲ್ಲ" (ಮತ್ತಾಯ 23:2, 3).

ಸಭೆಯು ಏನಾಗಿರುವುದು ಎಂಬುದರ ಬಗ್ಗೆ ಹೊಸ ಒಡಂಬಡಿಕೆಯು ನಿರ್ದಿಷ್ಟವಾಗಿರುತ್ತದೆ,[1] ಅದು ಕ್ರಿಸ್ತನ ಸುವಾರ್ತೆಗೆ ವಿಧೇಯರಾದವರಿಂದ ಮಾಡಲ್ಪಟ್ಟ ಆತ್ಮಿಕ ದೇಹವಾಗಿದೆ ಮತ್ತು ಇದರಿಂದ, ಅವರು *ಆತನ ಜನಾಂಗವಾಗಿದ್ದಾರೆ* ಹಾಗೂ ಕೊಡಲ್ಪಟ್ಟ ಸ್ಥಳದಲ್ಲಿ *ಆತನ ಜನಾಂಗದಂತೆ* ಆರಾಧಿಸುತ್ತಿರುವರು ಮತ್ತು ಕೆಲಸ ಮಾಡುತ್ತಿರುವರು ಎಂದು ಅರ್ಥವಾಗುತ್ತದೆ. ಅವರು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳುವರು ಮತ್ತು ಆತನ ಕಡೆಗೆ ಕರ್ತನಂತೆ ನೋಡುವರು. ಅವರು ಜೀವಿಸುವ ಸಂಘಟನೆಯಾಗಿದ್ದು, ಅದರಲ್ಲಿ ಜೀವಿಸುವ ದೇವರ ಆತ್ಮನು ವಾಸಿಸುವನು. ಈ ಸಂಘಟನೆಯಾಗುವವರು ಆತನ ವಾಕ್ಯಕ್ಕೆ ವಿಧೇಯರಾಗುವದರ ಮುಖಾಂತರ, ದೇವರೊಂದಿಗೆ, ಕ್ರಿಸ್ತನೊಂದಿಗೆ ಮತ್ತು ಪರಿಶುದ್ಧಾತ್ಮನೊಂದಿಗೆ ನಿಕಟವಾದ, ಮುಂದುವರಿದ ಅನ್ಯೋನ್ಯತೆಯನ್ನು ಕಾದುಕೊಂಡು ಹೋಗುವರು.

ಸಭೆಯು ಏನಾಗಿರುವುದು ಎಂಬುದರ ಈ ಹಿನ್ನೆಲೆಗೆ ವಿರೋಧವಾಗಿ, ಸಭೆಯು ಏನಾಗಿರುವದಿಲ್ಲ ಎಂಬುದನ್ನು ಜಾಗರೂಕತೆಯಿಂದ ಗಮನಿಸೋಣ. ಇದರಿಂದ, ಹೊಸ ಒಡಂಬಡಿಕೆಯ ಸಭೆಯು ಏನಾಗಿರಬೇಕೆಂದು ದೇವರು ಉದ್ದೇಶಿಸಿದ್ದನೆಂಬುದನ್ನು ಹೆಚ್ಚು ಸ್ಪಷ್ಟವಾಗಿ ಕೊಡಲು ನಿರೀಕ್ಷಿಸುವೆವು.

## ಒಂದು ದೈಹಿಕ ರಚನೆಯಾಗಿರುವುದಿಲ್ಲ

ಮೊದಲನೆಯದು, ಸಭೆಯು ಒಂದು ದೈಹಿಕ ರಚನೆಯಾಗಿರುವದಿಲ್ಲ. ಒಬ್ಬನು ಒಂದು ಸಭೆಯ ಕಟ್ಟಡವನ್ನು ದಾಟಿಹೋಗುತ್ತಿರುವಾಗ, "ಅಲ್ಲಿ ಚರ್ಚ್ ಇದೆ!" ಎಂದು ಹೇಳಿದರೆ ಅವನು ತಪ್ಪಾದವನಾಗಿರುತ್ತಾನೆ. ಸಭೆಯು ಇಟ್ಟಿಗೆ ಮತ್ತು ಸಿಮೆಂಟಿನಿಂದ ಮಾಡಿದ ಒಂದು ಭೌತಿಕ ಕಟ್ಟಡವಾಗಿರುವದಿಲ್ಲಿ, ಕಲ್ಲುಗಳಂತೆ ಜೀವಿಸುವ ಕ್ರೈಸ್ತರು ಸಭೆಯೆಂದು ಕರೆಯಲ್ಪಡುವ ದೇಹವನ್ನು ರಚಿಸುತ್ತಾರೆ (1 ಕೊರಿಂಥ 12:27; 1 ಪೇತ್ರ 2:5).

ಒಂದಾಗಿ ಕೂಡಿ ಬರಲು ಮತ್ತು ಆರಾಧಿಸಲು ಸಭೆಯು ಒಂದು ಕಟ್ಟಡವನ್ನು ಉಪಯೋಗಿಸಬಹುದು: ಆದರೆ ಸಭೆಯು ಕಟ್ಟಿಗೆ, ಕಲ್ಲು ಹಾಗೂ ಗ್ಲಾಸು ಆಗಿರುವದಿಲ್ಲ. ಸಭೆಯು ಜೀವಿಸುವ ಅಸ್ತಿತ್ವವಾಗಿರುತ್ತದೆ, "... ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:22) ಎಂದು ಪೌಲನು ಎಫೆಸದ ಕ್ರೈಸ್ತರಿಗೆ ಹೇಳಿದನು, "ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ" (1 ಪೇತ್ರ 2:5) ಎಂದು ಪೇತ್ರನು ಹೇಳಿದನು.

ದೈಹಿಕವಾಗಿರುವ ಸಭೆಯ ಒಂದೇ ಲಕ್ಷಣವು ಸಭೆಯಲ್ಲಿ ಒಳಗೊಂಡಿರುವದರ ಆತ್ಮಗಳು ವಾಸಿಸುವ ಮಾನವ ದೇಹಗಳು. ಒಬ್ಬ ಮಾನವ ಜೀವಿಯು ಭೌತಿಕ ದೇಹದಲ್ಲಿ ವಾಸಿಸುವ ಮಾನವ ಆತ್ಮವಾಗಿದೆ. ಆ ಮಾನವ ಜೀವಿಯು ಒಬ್ಬ ಕ್ರೈಸ್ತನಾಗುವಾಗ, ಅವನು ಸಭೆಯಾಗುತ್ತಾನೆ. ಅವನು, ಸಭೆಯಂತೆ, ಭೌತಿಕ ದೇಹದಲ್ಲಿ ನಡೆಯುತ್ತಾನೆ, ಆರಾಧಿಸುತ್ತಾನೆ, ಮನಸ್ಸು ಮಾಡುತ್ತಾನೆ ಮತ್ತು ಕಾರ್ಯಮಾಡುತ್ತಾನೆ. ಅದೊಂದೇ ಸಭೆಯ ಸ್ಪರ್ಶಿಸಬಹುದಾದ ಗುಣಲಕ್ಷಣವಾಗಿದೆ.

ಸಾಂಧರ್ಭಿಕವಾಗಿ, ಒಬ್ಬ ವ್ಯಕ್ತಿಯು, "ನಾನು ಚರ್ಚಿಗೆ ಹೋಗುತ್ತೇನೆ" ಎಂದು ಹೇಳಬಹುದು. "ನಾನು ಸಭೆಯ ಸಭಾಕೂಟಕ್ಕೆ ಹೋಗುತ್ತೇನೆ" ಎಂಬ ಅರ್ಥದಲ್ಲಿ ಅವನು ಹೇಳಿರುತ್ತಾನೆ. ಹೊಸ ಒಡಂಬಡಿಕೆಯಲ್ಲಿ "ಚರ್ಚ್" ಎಂಬ ಪದವು ಸಭಾಕೂಟಕ್ಕೆ ಉಪಯೋಗಿಸಲ್ಪಟ್ಟಿದೆ (1 ಕೊರಿಂಥ 11:18); ಆದರೆ ಹೊಸ ಒಡಂಬಡಿಕೆಯಲ್ಲಿ "ಚರ್ಚ್" ಎಂಬ ಪದವು ಹೆಚ್ಚು ಸಲ ಉಪಯೋಗಿಸಲ್ಪಡುವದನ್ನು ಯೋಚಿಸಿದರೆ - ಕ್ರಿಸ್ತನ ಆತ್ಮಿಕ ದೇಹಕ್ಕಾಗಿ ಹುದ್ದೆಯಂತೆ - "ನಾನು ಚರ್ಚಿಗೆ ಹೋ ಗುತ್ತೇನೆ" ಎಂದು ಹೇಳುವುದು ಸರಿಯಾದದ್ದಾಗಿರುವದಿಲ್ಲ. ನಾವು ಚರ್ಚಿಗೆ ಹೋಗುವ ದಿಲ್ಲ, ಯಾಕಂದರೆ ನಾವು ಚರ್ಚ್ ಆಗಿರುತ್ತೇವೆ! ಸಭೆ, ಇಲ್ಲವೇ ಕ್ರೈಸ್ತರು, ಆರಾಧನೆಗಾಗಿ ಮತ್ತು ಅಧ್ಯಯನಕ್ಕಾಗಿ ಒಂದು ಸಭಾಕೂಟವಾಗಿ ಕೂಡಿಬರಬಹುದು, ಆದರೆ ಒಬ್ಬ ಕ್ರೈಸ್ತರು ಹೋಗಿ, ಆರಾಧನೆಗಾಗಿ ಸಭೆಯ ಒಂದು ಭಾಗವಾಗಿ, ಆ ಮೇಲೆ ಒಬ್ಬನು ಒಂದು ಮನೆಯನ್ನು ಪ್ರವೇಶಿಸುವಂತೆ ಮತ್ತು ಬಿಟ್ಟುಹೋಗುವಂತೆ ಕ್ರಿಸ್ತನ ದೇಹವನ್ನು ಬಿಟ್ಟುಹೋಗಲಾರನು.

ಸಭೆಯು ಭೌತಿಕ ಮಂದಿರವಾಗಿರುವುದಿಲ್ಲ ಎಂಬುದಕ್ಕೆ ನಮಗೆ ಸಂತೋಷ ವಿರುವದಿಲ್ಲವೇ? ಅದು ಆಗಿದ್ದರೆ, ಅದು ಸ್ಥಳಿಕವಾದದ್ದು, ಮಿತಿಯುಳ್ಳದ್ದು, ಜೀವರಹಿತ ವಾದದ್ದು, ಮತ್ತು ಪ್ರೀತಿಯಿಲ್ಲದ್ದು ಆಗಿರುತ್ತಿತ್ತು. ಕಥೀಡ್ರಲ್‌ದಲ್ಲಿ ಮಾತ್ರವೇ ಆರಾಧನೆಯು ಮಾಡಲ್ಪಡುವದಾದರೆ, ಆಗ ಆರಾಧನೆಯು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಮಾತ್ರವೇ ನಡಿಸಲ್ಪಡಬೇಕಾಗುತ್ತದೆ. ಬದಲಾಗಿ ಸಭೆಯು, ಕ್ರಿಸ್ತನ ರಕ್ತದಿಂದ ವಿಮೋಚಿತ ಜನರಂತೆ, ಕ್ರಿಸ್ತನ ಪ್ರಭಾವವನ್ನು, ಇತರ ಎಲ್ಲಾ ಜನಾಂಗಗಳ ಮಧ್ಯದಲ್ಲಿ ಮತ್ತು ಜಗತ್ತಿನ ಸ್ಥಳಗ ಳಲ್ಲಿ ಚಲಿಸುವಂತೆ ಮಾಡುವುದು. ಅದು ಆರಾಧನೆಯು, ಕ್ರೈಸ್ತರು ತಮ್ಮ ಪರಲೋಕದ ತಂದೆಯನ್ನು ಆರಾಧಿಸಲು ನಿರ್ಣಯಿಸುವ ಯಾವುದೇ ಸ್ಥಳದಲ್ಲಿ ಮತ್ತು ಯಾವುದೇ ಸಮಯದಲ್ಲಿ ನಡಿಸಲು ಶಕ್ತರನ್ನಾಗಿ ಮಾಡುವುದು. ಕ್ರೈಸ್ತರು ಹೋಗುವಲ್ಲಿಗೆ ಸಭೆಯು ಹೋಗುವುದು, ಯಾಕಂದರೆ ಅದು ಕ್ರೈಸ್ತರಿಗಾಗಿ ಇರುತ್ತದೆ.

ನಾವು ಹೇಳುವುದರ ಬಗ್ಗೆ ಮತ್ತು ಮಾಡುವುದರ ಬಗ್ಗೆ ಜಾಗರೂಕರಾಗಿರೋಣ, ಯಾಕಂದರೆ ನಾವು ಕ್ರಿಸ್ತನ ಸಭೆಯಂತೆ ಮಾತಾಡುತ್ತೇವೆ ಮತ್ತು ಕಾರ್ಯಮಾಡುತ್ತೇವೆ, ಆರಾಧನೆಗಾಗಿ ನಾವು ಕೂಡಿಬರುವಾಗ ಮಾತ್ರ ಆತನ ಸಭೆ ಆಗಿರುವದಿಲ್ಲ; ನಾವಿರುವಲ್ಲಿ ನಾವು ಆತನ ಸಭೆಯಾಗಿರುತ್ತೇವೆ. "ಆತನ ಸ್ವಂತ ಸ್ವಾಸ್ಥ್ಯದ ಜನಾಂಗವಾಗಿರಲು" ನಮ್ಮನ್ನು ಕರೆದು, ತನ್ನ ರಕ್ತದಿಂದ ಶುದ್ಧೀಕರಿಸಿ ಬೇರೆಯಾಗಿಟ್ಟಿದ್ದಾನೆ. ದೇವರಿಗೆ ಸತ್ತ ದೇಹ, ಒಂದು ನಿರ್ಜೀವವಾದ ವಸ್ತು ಇರುವದಿಲ್ಲ, ಆದರೆ ಕ್ಷಮಿಸಲ್ಪಟ್ಟ, ಆಯ್ದುಕೊಂಡ ಜನಾಂಗವಾದ ಸಜೀವ ಕುಟುಂಬವು ಇರುತ್ತದೆ. ಆತನ ಸಭೆಯು ಆತ್ಮಿಕ ಜನಾಂಗ, ಪರಿಶುದ್ಧ ಯಾಜಕತ್ವ, ಆತನ ಅನ್ಯೋನ್ಯತೆಗಾಗಿ ಒಂದು ಸಮಾಜವಾಗಿರುತ್ತದೆ (1 ಪೇತ್ರ 2:9).

## ಒಂದು ಸ್ನೇಹತ್ವದ ಸಂಘವಾಗಿರುವುದಿಲ್ಲ

ಎರಡನೆಯದಾಗಿ, ಸಭೆಯು ಒಂದು ಸಾಮಾಜಿಕ ಕ್ಲಬ್ ಆಗಿರುವುದಿಲ್ಲ. ಇದು ಉತ್ತೇಜನಕೊಡುವ ಸ್ನೇಹತ್ವಕ್ಕಿಂತ ಮತ್ತು ಇತರರೊಂದಿಗೆ ಉಲ್ಲಾಸಕರ ಸಂಬಂಧಕ್ಕಿಂತ ಹೆಚ್ಚಿನದಾಗಿದೆ.

ಅನ್ಯೋನ್ಯತೆಯು ಸಭೆಯ ತಕ್ಷಣದ ಲಾಭವಾಗಿದೆ, ಆದರೆ ಸಭೆಯು ಅನ್ಯೋನ್ಯತೆಗಿಂತ ಹೆಚ್ಚಿನದಾಗಿದೆ. ಮಾರ್ಪಡುವಿಕೆಯಲ್ಲಿ, ಒಬ್ಬನು ಆತ್ಮಿಕ ಮರಣದಿಂದ ಮೇಲಕ್ಕೆ ಎತ್ತಲ್ಪಡುತ್ತಾನೆ ಹಾಗೂ ಕ್ರಿಸ್ತನ ದೇಹದಲ್ಲಿ ಇತರ ಕ್ರೈಸ್ತರೊಂದಿಗೆ ಸಜೀವಿಯಾಗಿ ಇಡಲ್ಪಡುತ್ತಾನೆ. ಪೌಲನು ಹೀಗೆ ಬರೆದಿದ್ದಾನೆ,

> ಆದರೆ ಕರುಣಾನಿಧಿಯಾಗಿರವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ.) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ (ಎಫೆಸ 2:4-7).

ತನ್ನ ಕುಮಾರನ ಯಜ್ಞದಿಂದ ದೇವರು ವಿಮೋಚಿಸಿದವರಾದ ನಾವು ಆತನ ಆತ್ಮ ಕುಟುಂಬದಲ್ಲಿ ಸ್ವೀಕರಿಸಿಕೊಳ್ಳಲ್ಪಟ್ಟಿದ್ದೇವೆ ಮತ್ತು ಆತನು ಪ್ರೀತಿಯಿಂದ, " 'ಅಪ್ಪಾ ತಂದೆಯೇ!' ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (ಗಲಾತ್ಯ 4:6). ದೇವರ ಕುಟುಂಬದಂತೆ, ಸಭೆಯು ಆಳವಾದ ಪರಸ್ಪರ ವೈಯಕ್ತಿಕ ಸಬಂಧಗಳಿಂದ ವೈಶಿಷ್ಟ್ಯತೆ ಹೊಂದಿದೆ, ಆದರೆ ಈ ಅನ್ಯೋನ್ಯತೆಯು ದೇವರೊಂದಿಗೆ ನಮ್ಮ ಕುಟುಂಬ ಬಂಧನಗಳಿಂದ ಬೆಳೆಯುತ್ತದೆ. ಅಪೊಸ್ತಲರ ಯೋಹಾನನು ಹೀಗೆ ಬರೆದನು, "ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ" (1 ಯೋಹಾನ 5:1).

ನೀನು ಚಿಕ್ಕ ಬಾಲಕನಾಗಿದ್ದಾಗ ನಿನ್ನ ತಂದೆತಾಯಿಗಳು ತೀರಿ ಹೋದರು ಮತ್ತೆ ಅಗತ್ಯತೆಯ ನಿಮಿತ್ತವಾಗಿ ನೀನು ಒಂದು ಅನಾಥಾಶ್ರಯದಲ್ಲಿ ಇಡಲ್ಪಟ್ಟಿಯೆಂದು ಕಲ್ಪಿಸಿಕೋ. ಏಕಾಂಗಿತನವನ್ನು, ಬಳಿದಾಗಿರುವಿಕೆಯನ್ನು, "ಮನೆಯಿಲ್ಲದವನು" ಎಂಬ ಪದದಿಂದ ವಿವರಿಸಲ್ಪಟ್ಟ ದುಸ್ಥಿತಿಯನ್ನು ನೀನು ಅನುಭವಿಸಿದಿ. ವರ್ಷಗಳು ದಾಟಿಹೋದವು, ಮತ್ತು ನಿನ್ನ ಸ್ವಂತ ಕುಟುಂಬವಿರಬಹುದು ಯಾವ ರೀತಿಯಲ್ಲಿರಬಹುದು ಎಂಬುದನ್ನೇ ಮರೆತುಬಿಟ್ಟು. ಒಂದು ದಿನ, ಹೀಗೆ ಹೇಳೋಣ, ಒಂದು ಅದ್ಭುತವಾದ ಕುಟುಂಬದಿಂದ ನೀನು ದತ್ತು ಸ್ವೀಕರಿಸಲ್ಪಟ್ಟ. ಪ್ರೀತಿಯ ಮತ್ತು ಗುರುತಿಸುವಿಕೆಯ ನೂತನ ಜಗತ್ತಿನಲ್ಲಿ ನೀನು ಪ್ರವೇಶಿಸಿದಿ. ಕೂಡಲೇ, ನಿನ್ನನ್ನು ಪ್ರೀತಿಸುವ ಹಾಗೂ ನಿನ್ನ ಜೋಪಾಸನೆ ಮಾಡುವ ಭೂಲೋಕದ ತಂದೆ ದೊರೆತನು. ತಾಯಿಯ ಪ್ರೀತಿಯ ಮೃದವಾದ ಸ್ಪರ್ಶಗಳನ್ನು ಅನುಭವಿಸಿದಿ. ಸಹಾಯಕ್ಕಾಗಿ ಸಹೋದರಿಯರು ಮತ್ತು ಕಟುಂಬದ ಪ್ರೀತಿ ದೊರೆಯಿತು.

*ದೇವರ ಹತ್ತಿರ ಒಂದು ಸತ್ತ ದೇಹವಾಗಲೀ,*
*ಒಂದು ನಿರ್ಜೀವ ವಸ್ತುವಾಗಲೀ ಇರುವುದಿಲ್ಲ,*
*ಆದರೆ ಕ್ಷಮಿಸಲ್ಪಟ್ಟ, ಆಯ್ದುಕೊಂಡ*
*ಜನಾಂಗವಾಗಿ ಮಾಡಲ್ಪಟ್ಟ ಒಂದು*
*ಜೀವಿಸುವ ಕುಟುಂಬವಿರುವುದು.*

ಕುಟುಂಬದೊಂದಿಗೆ ಒಂದಾಗಿರುವ ಸುಂದರವಾದ ದಿನಗಳು ನಿನ್ನವಾಗಿರುವವು, ಮತ್ತು ಕುಟುಂಬದಿಂದ ಸೃಷ್ಟಿಸಲ್ಪಟ್ಟ ಮತ್ತು ಪ್ರೇರೇಪಿಸಲ್ಪಟ್ಟ ಭವಿಷ್ಯವು ನಿನಗಿರುವುದು. ಸಮಯವು ಗತಿಸುವದರೊಂದಿಗೆ, ಕುಟುಂಬದ ಆಳವಾದ ಪ್ರೀತಿಯನ್ನು ನೀನು ತಿಳಿದುಕೊಂಡಿ, ಇದೆಲ್ಲವೂ ಏನನ್ನು ತಂದಿತು? ಒಂದು ಸಮಾಜದ ಕ್ಲಬ್ಬಿನಲ್ಲಿಯಂತೆ ಸ್ನೇಹತ್ವದಿಂದ ಮತ್ತು ಸಂಬಂಧದಿಂದ ನೀನು ಒಂದಾಗಿ ಎಳೆಯಲ್ಪಟ್ಟಿಯೋ? ಇಲ್ಲ. ಈ ಕುಟುಂಬದಲ್ಲಿ ನೀನು ದತ್ತು ಸ್ವೀಕರಿಸಲ್ಪಟ್ಟಿ. ನೀನು ನಿಜವಾಗಿಯೂ ಕುಟುಂಬದ ಭಾಗವಾದಿ, ಮತ್ತು ನಿನ್ನ ಜೀವಿತವನ್ನು ಅನುಸರಿಸಿದ ಅನ್ಯೋನ್ಯತೆ ಮತ್ತು ಆಶೀವಾ ರ್ದಗಳು ಕುಟುಂಬದೊಂದಿಗೆ ಒಂದಾಗಿ ಮಾಡಿದವು.

ಈಗ ಅದೇ ರೀತಿಯ ಬದಲಾವಣೆಯು ಹೊಸ ಕ್ರೈಸ್ತನಿಗೆ ಸಂಭವಿಸುತ್ತದೆ ಅವನು ಒಂದು ನೂತನ ಕುಟುಂಬದಲ್ಲಿ, ದೇವರ ಕುಟುಂಬದಲ್ಲಿ ಇಡಲ್ಪಟ್ಟಿದ್ದಾನೆ. ಈ ವಿಧಾನವನ್ನು ವಿವರಿಸಲು ಪೌಲನು "ಪುತ್ರರನ್ನಾಗಿ ಸ್ವೀಕರಿಸು" ಎಂಬ ವಾಕ್ಯವನ್ನು ಉಪಯೋಗಿಸಿದನು (ಎಫೆಸ 1:5).

ಒಬ್ಬ ವ್ಯಕ್ತಿಯು ತನ್ನ ಜೀವಿತವನ್ನು ಎಂದೂ ಬದಲಾಯಿಸದ, ಒಂದು ಸಾಮಾಜಿಕ ಕ್ಲಬ್‌ನ್ನು ಸೇರಿಕೊಳ್ಳಬಹುದು. ಒಂದು ಸಮಾಜಿಕ ಕ್ಲಬ್ಬು ಜೀವನದ ವ್ಯವಹಾರಕ್ಕೆ ಸಂಬಂಧಿಸಿದ ಒಂದು "ಹೆಚ್ಚಿನ" ಸಂಗತಿಯಾಗಿದೆ. ಅದು ನಮಗೆ ಸೇವೆಮಾಡದ ಯಾವುದೇ ಸಮಯದಲ್ಲಿ ನಾವು ಅದನ್ನು ತೆಗೆದುಹಾಕಬಹುದು. ನಮ್ಮ ಮನರಂಜನೆಗಾಗಿ ಮತ್ತು ಆನಂದಕ್ಕಾಗಿ ಅದು ಅಸ್ತಿತ್ವದಲ್ಲಿರುತ್ತದೆ. ಕುಟುಂಬದಲ್ಲಿ ಪ್ರವೇಶಿಸುವುದು ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ನೀವು ಕುಟುಂಬವನ್ನು ಪ್ರವೇ ಶಿಸುವಿರಿ ಮತ್ತು ಕುಟುಂಬವು ನಿಮ್ಮನ್ನು ಪ್ರವೇಶಿಸುವುದು. ಅದು ನಿಮ್ಮ ಜೀವಿತಕ್ಕಾಗಿ ಕೇವಲ "ಹೆಚ್ಚಿನ ಆಶೀರ್ವಾದ" ಮಾತ್ರ ಆಗಿರುವುದಿಲ್ಲ; ನೀವು ಕುಟುಂಬವಾಗುವಿರಿ.ನೀವು ಅದರ ಹೆಸರನ್ನು ತೆಗೆದುಕೊಳ್ಳುವಿರಿ; ಅದರ ಎಲ್ಲಾ ಸದಸ್ಯರು ನಿಮ್ಮವರಾಗುವರು, ಮತ್ತು ನೀವು ಅವರವರಾಗುವಿರಿ. ಜೀವನದಲ್ಲಿಯ ಯಾವುದೇ ಇತರ ಸಂಬಂಧಗಳಲ್ಲಿ ನೀವು ಹೆಚ್ಚು ಸಂಪೂರ್ಣವಾಗಿ ಒಂದಾಗಿ ಬೆಸೆಯಲ್ಪಟ್ಟಿರುವಿರಿ.

ದೇವರ ಕುಟುಂಬವನ್ನು ಪ್ರವೇಶಿಸುವ ಎಲ್ಲರೂ ಒಂದು ನೂತನ ಜನನದಿಂದ ಹಾಗೆ ಮಾಡುವರು (ಯೋಹಾನ 3:5). ನೀವು ಅದನ್ನು "ಸೇರಲಾರಿರಿ"; ನೀವು ಹುಟ್ಟುವಿರಿ, ಇಲ್ಲವೇ ಅದರೊಳಗೆ ದತ್ತು ಸ್ವೀಕರಿಸಲ್ಪಡುವಿರಿ. ಬದಲಾಗದೇ ಯಾರೂ ಆತನ ಕುಟುಂಬದಲ್ಲಿ ಪ್ರವೇಶಿಸಲಾರರು. ನಾವು ಕ್ರೈಸ್ತನವರಾಗುವಾಗ, ನಾವು ಕ್ರಿಸ್ತನ ಹೆಸರನ್ನು ತೆಗೆದುಕೊಳ್ಳುವೆವು ಮತ್ತು "*ಕ್ರಿಸ್ತನಲ್ಲಿ ಇರುವವರು*" (ಕ್ರೈಸ್ತರು) ಎಂದು ಕರೆಯಲ್ಪಡುವೆವು. ನಾವು ನಮ್ಮ ಸಂಬಂಧಗಳಲ್ಲಿ, ನಮ್ಮ ನಡೆತೆಯಲ್ಲಿ ಮತ್ತು ನಮ್ಮ ಬಯಕೆಗಳಲ್ಲಿ ಭಿನ್ನರಾಗುವೆವು. ನಾವು ಒಂದು ಕುಟುಂಬವಾಗುವೆವು, ದೇವರಿಂದ ನಡಿಸಲ್ಪಡುವೆವು ಮತ್ತು ಊಟಮಾಡಿಸಲ್ಪಡುವೆವು, ಆತನಿಂದ ಪೋಷಿಸಲ್ಪಡುವೆವು ಹಾಗೂ ಪಾಲಿಸಲ್ಪಡುವೆವು, ಆತನಿಂದ ಒದಗಿಸಲ್ಪಡುವೆವು ಮತ್ತು ಕಾಪಾಡಲ್ಪಡುವೆವು, ಯೇಸುವಿನ ರಕ್ತದಿಂದ ಒಂದಾಗಿ ಬಂಧಿಸಲ್ಪಟ್ಟ ಮಕ್ಕಳಂತೆ ಒಂದಾಗಿ ಜೀವಿಸುವೆವು,

ಆರಾಧಿಸುವೆವು ಮತ್ತು ಸತತವಾದ ಅನ್ಯೋನ್ಯತೆಯುಳ್ಳವರಾಗಿರುವೆವು.

## ಒಂದು ಮಾನವ ಸೂಚನೆಯಾಗಿರುವುದಿಲ್ಲ

ಮೂರನೆಯದಾಗಿ, ಸಭೆಯು ಕೇವಲ ಮಾನವ ಸೂಚನೆಯಾಗಿರುವುದಿಲ್ಲ. ಅದು ಮನುಷ್ಯನಿಂದ ಯೋಚನೆಯಾಗಲೀ ಇಲ್ಲವೇ ಮಾನವನಿಂದ ಸಂಶೋಧಿಸಿದ್ದಾಗಲೀ ಆಗಿರುವುದಿಲ್ಲ. ಅದು ಮನುಷ್ಯನಿಂದ ನಿಯಂತ್ರಿಸಲ್ಪಡುವಂಥದ್ದಾಗಲೀ ಇಲ್ಲವೇ ಮನುಷ್ಯನಿಂದ ಪೋಷಿಸಲ್ಪಡುವಂಥದ್ದಾಗಲೀ ಆಗಿರುವದಿಲ್ಲ.

ಸಭೆಯು ದೇವರ ವಿಚಾರವೂ ದೇವರ ಸೃಷ್ಟಿಯೂ ಆಗಿರುತ್ತದೆ. ಜಗತ್ತು ಅಸ್ತಿತ್ವಕ್ಕೆ ಬರುವ ಮೊದಲೇ ಆತನು ಮಾನವನ ರಕ್ಷಣೆಗಾಗಿ ಶಿಲುಬೆಯನ್ನೂ ಸಭೆಯನ್ನೂ ಯೋಜಿಸಿದ್ದನು. ಮೊದಲನೆಯ ಪಾಪಕ್ಕಿಂತ ಮೊದಲು, ಆತನು ಕ್ಷಮಾಪಣೆಯನ್ನು ಯೋಚಿಸಿದ್ದನು. ಹಿಂದಿನ ನಿತ್ಯತ್ವದಲ್ಲಿ, ದೇವರು ಮೊದಲನೆಯ ನಕ್ಷತ್ರವನ್ನು ಇಲ್ಲವೇ ಹುಲ್ಲು ಕಡ್ಡಿಯನ್ನು, ಮೊದಲನೆಯ ಪತಂಗದ ಹುಳುವನ್ನು ಇಲ್ಲವೇ ಮಾನವ ಜೀವಿಯನ್ನು ಸೃಷ್ಟಿಸುವ ಮೊದಲು, ದೇವರು ಕ್ರಿಸ್ತನ ದೇಹವನ್ನು ಪ್ರವೇಶಿಸುವವನನ್ನು ರಕ್ಷಿಸಲು ಆಯ್ದುಕೊಂಡನು ಎಂದು ಪೇತ್ರನು ಬರೆದನು. ಆದುದರಿಂದ, ಕ್ರೈಸ್ತರು "ಪರಿಶುದ್ಧಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವದಕ್ಕೂ ಯೇಸುಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿ ಕೊಳ್ಳಲ್ಪಟ್ಟಿರುವರು" (1 ಪೇತ್ರ 1:1, 2). ದೇವರ ಜನರು, ಕುರಿಮರಿಯಾದಾತನ ಅಮೂಲ್ಯ ರಕ್ತದಿಂದ ವಿಮೋಚಿತರಾದವರು, ಪ್ರಕಟನೆ 13:8ರಲ್ಲಿ ಜಗದುತ್ಪತ್ತಿಯಿಂದ ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟವರು ಎಂದು ವಿವರಿಸಲ್ಪಟ್ಟಿದ್ದಾರೆ. ಶಿಲುಬೆಯ ಮುಖಾಂತರವಾಗಿ ರಕ್ಷಿಸಲ್ಪಡಲು ಆಯ್ಕೆಮಾಡಿಕೊಳ್ಳುವವರು - ರಕ್ಷಿಸಲು ದೇವರು ಆಯ್ದುಕೊಂಡವರು - ವೈಯಕ್ತಿಕವಾಗಿ ಅಲ್ಲ, ಆದರೆ ಒಂದು ಗುಂಪಿನಂತೆ ಇದ್ದಾರೆ. ಕ್ರಿಸ್ತನ ರಕ್ತದ ಸುರಿಸುವಿಕೆಯ ಪರಿಣಾಮವು ಸಭೆಯಾಗಿತ್ತು ಮತ್ತು ಸಭೆಯಾಗಿರುವುದು. ಕ್ರಿಸ್ತನ ರಕ್ತದಲ್ಲಿ ತೊಳೆಯಲ್ಪಟ್ಟವರು ಒಂದು ರಾಜ್ಯವಾಗಿ ಮಾಡಲ್ಪಟ್ಟರು ಎಂದು ಯೋಹಾನನು ಹೇಳಿದನು (ಪ್ರಕಟನೆ 1:5, 6).

ಈ ವಿಚಾರ ಸರಣಿಯು ನಮ್ಮ ಮನಸ್ಸುಗಳಲ್ಲಿ ಸತ್ಯವನ್ನು ಸುಳಿಯುವಂತೆ ಮಾಡುತ್ತದೆ: ಜಗತ್ತು ಪ್ರಾರಂಭವಾಗುವದಕ್ಕಿಂತ ಮೊದಲು ಕ್ರಿಸ್ತನ ಯಜ್ಞವನ್ನು ದೇವರು ನೇಮಕ ಮಾಡಿದ್ದರೆ ಮತ್ತು ಸಭೆಯು ಕ್ರಿಸ್ತನ ರಕ್ತದಿಂದ ಸೃಷ್ಟಿಸಲ್ಪಟ್ಟಿದ್ದರೆ, ಆಗ, ಸಭೆಯು ದೇವರ ನಿತ್ಯ ಉದ್ದೇಶದಲ್ಲಿ ಇರುವುದು ಎಂದಾಗುತ್ತದೆ. ಆದುದರಿಂದ ಎಫೆಸ 3:10, 11ರಲ್ಲಿ ಪೌಲನು ಇದೇ ಸತ್ಯವನ್ನು ಹೇಳಿದ್ದಕ್ಕಾಗಿ ಆಶ್ಚರ್ಯಪಡಬಾರದು:

> ದೇವರು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗ ಬೇಕೆಂಬುದನ್ನು ಉದ್ದೇಶಿಸಿದ್ದನು.

ಗಲಾತ್ಯದ ಸ್ವಲ್ಪ ಜನರು ಕ್ರಿಸ್ತನ ಅಪೊಸ್ತಲನಂತೆ ಪೌಲನ ಅಧಿಕಾರವನ್ನು ತಿರಸ್ಕರಿಸಿದರು, ಈ ಕಾರಣದಿಂದ, ಅವನ ಸಂದೇಶವು ದೇವರಿಂದ ಪ್ರೇರೇಪಿಸಲ್ಪಟ್ಟಿರುವದಿಲ್ಲ ಎಂದು ಹೇಳಿದರು. ಅವರಿಗೆ ಬರೆದ ತನ್ನ ಪತ್ರಿಕೆಯ ಪ್ರಾರಂಭದಲ್ಲಿ ತನ್ನ ಅಪೊಸ್ತಲತನಕ್ಕೆ ವಿರುದ್ಧವಾಗಿ ಅವರು ಹೇಳಿದ್ದಕ್ಕೆ ಅವನು ಉತ್ತರ ಕೊಟ್ಟನು:

"ಮನುಷ್ಯರ ಕಡೆಯಿಂದಾಗಲಿ ಮನುಷ್ಯನ ಮುಖಾಂತರದಿಂದಾಗಲಿ ಅಪೊಸ್ತಲನಾಗಿರದೆ ಯೇಸುಕ್ರಿಸ್ತನ ಮುಖಾಂತರವೂ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ತಂದೆಯಾದ ದೇವರಿಂದಲೂ ಅಪೋಲೊದ್ಯೋಗವನ್ನು ಹೊಂದಿದ ಪೌಲನೆಂಬ ನಾನು ..." (ಗಲಾತ್ಯ 1:1). ಸಂಕ್ಷೇಪದಲ್ಲಿದ್ದ ಪೌಲನ ವಾದವು ಅವನ ಅಪೊಸ್ತಲತನವು ಮನುಷ್ಯರಿಂದ ಪ್ರಾರಂಭವಾಗುವದಿಲ್ಲ ಮತ್ತು ಮನುಷ್ಯರಿಂದ ನಿರ್ವಹಿಸಲ್ಪಟ್ಟಿದ್ದಲ್ಲ ಎಂದಾಗಿರುತ್ತದೆ. "ನನ್ನ ಅಪೊಸ್ತಲತನವು ಯೇಸು ಕ್ರಿಸ್ತನ ಮುಖಾಂತರ ನೇರವಾಗಿ ಪರಲೋಕದಿಂದ ಬಂದಿತು" ಎಂದು ಅವನು ಹೇಳುತ್ತಿದ್ದಾನೆ.

ಪೌಲನು ತನ್ನ ಅಪೊಸ್ತಲತನಕ್ಕೆ ಹೇಳಿದ್ದನ್ನು ಸಭೆಗೂ ಸಹ ಹೇಳಬಹುದು: ಸಭೆಯು ಮನುಷ್ಯರಿಂದ ಬರಲಿಲ್ಲ. ಅದು ದೈವಿಕವಾದದ್ದಾಗಿದೆ. ಅದು ಪಾರಲೌಕಿಕವಾಗಿ ಯೋಜಿಸಲ್ಪಟ್ಟದ್ದು, ಪಾರಲೌಕಿಕವಾಗಿ - ಸಾರಲ್ಪಟ್ಟದ್ದು ಮತ್ತು ಪಾರಲೌಕಿಕವಾಗಿ ಕಳುಹಿಸಲ್ಪಟ್ಟದ್ದು. ಅದರ ವಿಚಾರವು ದೇವರ ಮನಸ್ಸಿನಲ್ಲಿ ಹುಟ್ಟಿತು. ಅದಕ್ಕಾಗಿದ್ದ ಯೋಜನೆಯು ಯೇಸುವಿನಿಂದ ಶಿಲುಬೆಯ ಮೇಲಿನ ಆತನ ಮರಣದಿಂದ ಮತ್ತು ಪಂಚಾಶತ್ತಮದ ದಿನದಂದು ಪರಿಶುದ್ಧಾತ್ಮನ ಅದ್ಭುತಕರವಾದ ಸುರಿಸುವಿಕೆಯಿಂದ ಕಾರ್ಯರೂಪಕ್ಕೆ ತರಲ್ಪಟ್ಟಿತು. ಜನರು ಸಭೆಯನ್ನು ಪ್ರವೇಶಿಸುವರು ಮತ್ತು ಕರ್ತನ ವಾಕ್ಯದಿಂದ ಹಾಗೂ ಪರಿಶುದ್ಧಾತ್ಮನ ನೆಲೆಗೊಳ್ಳುವಿಕೆಯಿಂದ ಪೋಷಿಸಲ್ಪಡುವರು. ಅದು ಕ್ರಿಸ್ತನದಾಗಿರುವುದು; ಆದುದರಿಂದ ಅದರ ದೊಡ್ಡತನವು ಮಾನವ ತಲೆಗಳಿಂದ ಇಲ್ಲವೇ ಕೈಗಳಿಂದ ಸುಧಾರಿಸಲ್ಪಡಲಾರದು, ಮತ್ತು ಅದರ ಮಹಿಮೆಯು ಮನುಷ್ಯನ ಮನಸ್ಸಿನಿಂದ ಇಲ್ಲವೇ ಬಲಗಳಿಂದ ಕೂಡಿಸಲ್ಪಡಲಾರದು.

ಒಬ್ಬನು ಸಭೆಯನ್ನು ಪ್ರವೇಶಿಸುವಾಗ, ಅವನು ಒಂದು ಮಾನವ ಸಂಸ್ಥೆಯನ್ನು ಇಲ್ಲವೇ ಸಭಾಪಂಗಡವನ್ನು ಪ್ರವೇಶಿಸುವುದಿಲ್ಲ. ದೇವರು ನಮ್ಮ ನಿತ್ಯ ನಿರೀಕ್ಷೆಯನ್ನು ಲೋಕದ ಜ್ಞಾನದ, ಶಕ್ತಿಯ, ಸಾಧನಗಳ ಇಲ್ಲವೇ ಬಲದ ಮೇಲೆ ಇಡಬೇಕೆಂದು ಹೇಳಿ ರುವುದಿಲ್ಲ. ಆತನು ನಮಗೆ ದೈವಿಕವಾಗಿ ಸೃಷ್ಟಿಸಲ್ಪಟ್ಟ, ಕ್ರಿಸ್ತನ ದೇಹವನ್ನು ಪ್ರವೇಶಿಸಲು ಹೇಳಿರುವನು. ಅದರ ಹಿಂದೆ ಮತ್ತು ಅದರಲ್ಲಿ ದೇವರ ಜ್ಞಾನವಿರುವುದು, ಆತನ ಬಲದಿಂದ ಕಟ್ಟಲ್ಪಟ್ಟ ಆತ್ಮಿಕ ದೇಹವಿರುವುದು ಮತ್ತು ಆತನ ಕೃಪೆ ಹಾಗೂ ಮಾರ್ಗದರ್ಶನದಿಂದ ನಿತ್ಯತ್ವಕ್ಕಾಗಿ ಕಾಪಾಡಲ್ಪಟ್ಟಿರುವುದು.

ಈ ಸಭೆಯನ್ನು ಪ್ರವೇಶಿಸುವ ಒಂದೇ ಮಾರ್ಗವು ಪರಿಶುದ್ಧ ಬರಹಗಳಲ್ಲಿ ಪ್ರಕಟಿಸಲ್ಪಟ್ಟ ಪ್ರೇರೇಪಿತ ಸುವಾರ್ತೆಗೆ ವಿಧೇಯನಾಗುವುದು (2 ಥೆಸಲೋನೀಕ 1:7-9). ಕ್ರಿಸ್ತನ ನಂಬಿಗಸ್ಥ ಸಭೆಯಾಗಿ ಮುಂದುವರಿಯುವ ಒಂದೇ ಮಾರ್ಗವು ಪರಿಶುದ್ಧ ಬರಹಗಳಲ್ಲಿ ಕಂಡುಕೊಳ್ಳುವ ಕ್ರೈಸ್ತ ಜೀವನಕ್ಕಾಗಿ ಅನುದಿನದ ವಿಧಾನವನ್ನು ಅನುಸರಿಸುವುದು (1 ಯೋಹಾನ 5:2, 3). ಈ ಸಭೆಗೆ ವಿಶ್ವಾಸ ಸೂತ್ರ ಇರುವುದಿಲ್ಲ ಆದರೆ ಪರಿಶುದ್ಧ ಬರಹಗಳಿರುವವು ಮತ್ತು ಶಿರಸ್ಸು ಇರುವದಿಲ್ಲ ಆದರೆ ಕ್ರಿಸ್ತನು ಇರುವನು.

## ಒಂದು ದೈವಿಕ ಪರ್ಯಾಯವಾಗಿರುವುದಿಲ್ಲ

ನಾಲ್ಕನೆಯದಾಗಿ, ಸಭೆಯು ಸೋತುಹೋದ ಒಂದು ಯೋಜನೆಗಾಗಿ ಒಂದು ಪರ್ಯಾಯವಾಗಿರುವದಿಲ್ಲ. ಅದು ಕರ್ತನ ಮನಸ್ಸಿನಲ್ಲಿದ್ದ, ಆದರೆ ಜಗತ್ತಿನ ಪಾಪಭರಿತತೆಯ ಕಾರಣದಿಂದ ಸ್ಥಳದಲ್ಲಿ ಇಡಲಾಗದ ಒಂದು ಉನ್ನತ ಸಂಸ್ಥೆಯ ಬದಲಾಗಿ ಇಡಲ್ಪಟ್ಟಂಥದ್ದಲ್ಲ.

ಸಭೆಯ ಯುಗವು ಸಮಯದ ಪಾರಂಭದಿಂದಲೇ ದೇವರು ಕಾರ್ಯಮಾಡಿದ

ಮತ್ತು ಚಲಿಸುವಂತೆ ಮಾಡಿದ ಕಡೆಗಿನ ಯುಗವಾಗಿದೆ, ನಿಯಮಿತದೊಂದಿಗೆ ಬರಲಿಕ್ಕಿದ್ದ ರಾಜ್ಯದ ಬಗ್ಗೆ ಪ್ರವಾದಿಗಳು ಮುಂತಿಳಿಸಿದರು, "ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು. ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ" (ಮಾರ್ಕ 1:15) ಎಂದು ಪ್ರಕಟಿಸುತ್ತ ಯೇಸುವು ತನ್ನ ಭೂಲೋಕದ ಸೇವೆಯನ್ನು ಪ್ರಾರಂಭಿಸಿದನು. ಶಿಲುಬೆಯು ಹತ್ತಿರಕ್ಕೆ ಬಂದಂತೆ, ಯೇಸುವು ತನ್ನ ಅಪೊಸ್ತಲರಿಗೆ ಹೀಗೆ ಹೇಳಿದನು,

> ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನಂದರೆ - ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು. ಪರಲೋಕ ರಾಜ್ಯದ ಬೀಗದ ಕೈ ಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತಿಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು (ಮತ್ತಾಯ 16:18, 19).

ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕಿಂತ ಕೆಲವೇ ದಿನಗಳ ಮೊದಲು ಯೇಸುವು ಅವರಿಗೆ, "ನಿಮಗಾದರೋ ಇನ್ನು ಸ್ವಲ್ಪ ದಿನಗಳೊಳಗಾಗಿ ಪರಿಶುದ್ಧಾತ್ಮದಲ್ಲಿ ಸ್ನಾನವಾಗುವುದು" (ಅಪೊಸ್ತಲರ ಕೃತ್ಯಗಳು 1:5) ಎಂದು ಹೇಳಿದ್ದನು. ಪಂಚಾಶತ್ತಮ ಹಬ್ಬದ ದಿನದಂದು, ಪರಿಶುದ್ಧಾತ್ಮನ ಅಪೊಸ್ತಲರ ಮೇಲೆ ಸುರಿಸಲ್ಪಟ್ಟನು ಮತ್ತು ಅವರು ಪರಿಶುದ್ಧಾತ್ಮಾನ ಬಲದಲ್ಲಿ ಮತ್ತು ಅವರು ಪ್ರಭಾವದಲ್ಲಿ ಬಾಪ್ತಿಸ್ಮ ಹೊಂದಿದರು. ಅಪೊಸ್ತಲರ ಕೃತ್ಯಗಳು 2:11-15ರಲ್ಲಿ, ಪೇತ್ರನು ಈ ಅದ್ಭುತಕರವಾದ ಘಟನೆಯನ್ನು ಯೋವೇಲನ ಪ್ರವಾದ ನೆಯಂತೆ ಗುರುತಿಸಿದನು (ಯೋವೇಲ 2:28-31), ಆ ಪ್ರವಾದನೆಯು "ಕೊನೆಯ ದಿನಗಳ" ಪ್ರಾರಂಭವನ್ನು, ಸಭೆಯ ಯುಗವನ್ನು, ದೇವರ ರಾಜ್ಯದ ಯುಗವನ್ನು ಮುಂತಿಳಿಸಿತ್ತು, ಹೀಗೆ, ಸಭೆಯು, ಆತನ ರಾಜ್ಯದ ಭೂಲೋಕದ ರೂಪವು, ದೇವರ ಕಾಲಪಟ್ಟಿಯಂತೆ ಮತ್ತು ದೇವರ ಮಾರ್ಗದಲ್ಲಿ ಸ್ಥಾಪಿಸಲ್ಪಟ್ಟಿತು.

ಹೆಚ್ಚಾದವರಿಂದ ಅಲ್ಲದಿದ್ದರೂ ಅನೇಕ ಜಗತ್ತಿನ ಸಭಾಪಂಗಡಗಳಿಂದ ಒಂದು ಧಾರ್ಮಿಕ ತಪ್ಪು ಅಂಗೀಕರಿಸಲ್ಪಟ್ಟಿರುವುದು, ಅದು ಪ್ರಿಮೆಲ್ಲೆನ್ನಿಯಾಲಿಜಮ್ ಎಂದು ಕರೆಯಲ್ಪಟ್ಟಿದೆ. ಪ್ರಕಟನೆ 20:1-4ರ ಅಲಂಕಾರಿಕ ಭಾಷೆಯ ಮೇಲೆ ಅತೀ ಹೆಚ್ಚಾಗಿ ಅವಲಂಭಿಸಿ, "pre" ಅಂದರೆ "ಮೊದಲು" ಮತ್ತು "millennial" ಅಂದರೆ "ಒಂದು ಸಾವಿರ ವರ್ಷಗಳು" ಎಂದರ್ಥವಾಗುತ್ತದೆ. ಪರಿಶುದ್ಧ ಬರಹಕ್ಕೆ ಅನುಗುಣವಲ್ಲದ ಈ ಬೋಧನೆಯು ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸಲು ಸಮಯದ ಅಂತ್ಯದಲ್ಲಿ ಬರುವನೆಂದು ಒಪ್ಪಿಕೊಳ್ಳುತ್ತದೆ. ಅಕ್ಷರಶಃವಾಗಿ ಯೆರೂಸಲೇಮಿನಲ್ಲಿ ದಾವೀದನ ಪ್ರಾಪಂಚಿಕ ಸಿಂಹಾಸನದ ಮೇಲೆ ಕುಳಿತುಕೊಂಡು, ಭೂಲೋಕದಲ್ಲಿ ಯೇಸುವು ತನ್ನ ರಾಜ್ಯದ ಮೇಲೆ ಅರಸನಂತೆ ಆಳುವನು ಎಂದು ವಾದಿಸುತ್ತದೆ. ಈ ದೃಷ್ಟಿಕೋ ನವನ್ನು ಹಿಡಿದುಕೊಂಡಿರುವವರು, ಇಸ್ರಾಯೇಲ್ ಜನಾಂಗವು ಈ ಸಮಯದಲ್ಲಿ ಪಾಲೆಸ್ತೀನಿನಲ್ಲಿ ಪುನಃಸ್ಥಾಪಿಸಲ್ಪಡುವುದು ಮತ್ತು ಭೂಲೋಕದ ಜನಾಂಗಗಳ ಮೇಲೆ ಆಳ್ವಿಕೆ ನಡಿಸುವುದು ಎಂದು ನಿರೀಕ್ಷಿಸುವರು. ಕ್ರಿ.ಶ. 70ರಲ್ಲಿ ಟೈಟಸ್‌ನಿಂದ ನಾಶಗೊಳಿಸಲ್ಪಟ್ಟ ಹಳೇ ಒಡಂಬಡಕೆಯ ದೇವಾಲಯವು ಪುನಃ ಕಟ್ಟಲ್ಪಡುವುದು, ಮತ್ತು ಪುರಾತನ ಲೇವಿಯರ ಯಜ್ಞದ ಯಾಜಕ ಪದ್ಧತಿಯು ಪುನಃ ಪ್ರಾರಂಭಿಸಲ್ಪಡುವುದು ಎಂದು ಅವರು ನಂಬುತ್ತಾರೆ. *ಯೇಸುವು ಮೊದಲನೆಯ ಸಲ ತನ್ನ ರಾಜ್ಯವನ್ನು ಸ್ಥಾಪಿಸಲಿಕ್ಕೆ*

*ಬಂದನು, ಆದರೆ ಆತನ ಪ್ರಯತ್ನವು ತಿರಸ್ಕರಿಸಲ್ಪಟ್ಟಿತು ಮತ್ತು ದೇವರ ರಾಜ್ಯದ ಸ್ಥಳದಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತು ಎಂದು ಪ್ರಿಮಿಲ್ಲೆನ್ನಿಯಾಲಿಜಮ್ ತೀರ್ಮಾನಿಸುತ್ತದೆ.* ಆದುದರಿಂದ, ಪ್ರಿಮಿಲ್ಲೆನ್ನಿಯಾಲಿಸ್ಟರು ಸಭೆಯನ್ನು ತರಲ್ಪಡಬೇಕಾಗಿದ್ದು ನಿಜವಾದ ದೇವರ ರಾಜ್ಯಕ್ಕೆ ಬದಲಾಗಿ ಮಾಡಲ್ಪಟ್ಟಿದ್ದೆಂದು ನೋಡುತ್ತಾರೆ.

ಸಭೆಯನ್ನು ಮತ್ತು ದೇವರ ರಾಜ್ಯವನ್ನು ಕುರಿತು ವಿಚಾರದ ಈ ಚತುರತೆಯುಳ್ಳ ಜಾಲದೊಂದಿಗೆ ಒಂದು ಸಂಗತಿ ಮಾತ್ರ ತಪ್ಪಾಗಿರುತ್ತದೆ: ಅದು ಸುಳ್ಳಾಗಿರುತ್ತದೆ, ಅದು ಜನರ ಕಲ್ಪನಿಕ ಹೇಳಿಕೆಗಳಿಂದ ಬೆಳೆದು ಬಂದಿತು; ಆದರೆ ದೇವರ ವಾಕ್ಯದಿಂದ ಅಲ್ಲ. ಒಂದರ ನಂತರ ಒಂದನ್ನು ಅದು ತಪ್ಪೆಂದು ತೋರಿಸುವದರ ಬದಲು, ಎಫೆಸ 3:11ರಲ್ಲಿ ಸಭೆಯು ದೇವರ ನಿತ್ಯವಾದ ಉದ್ದೇಶವೆಂದು ಪೌಲನು ಘೋಷಿಸಿದ್ದರ ಕಡೆಗೆ ಮಾತ್ರವೇ ನಾವು ತಿರುಗುವ ಅವಶ್ಯಕತೆ ಇರುತ್ತದೆ. ಒಂದೇ ವಾಕ್ಯದಿಂದ ಅವನು ಈ ತಪ್ಪಾದ ಬೋಧನೆಯನ್ನು ಸಂಪೂರ್ಣವಾಗಿ ಸೋಲಿಸುತ್ತಾನೆ. ಈ ವಿಷಯದಲ್ಲಿ ಸತ್ಯದ ಒಂದು ಅಂಶವು ಒಂದು ಟನ್ ತಪ್ಪನ್ನು ನಾಶಪಡಿಸುತ್ತದೆ. ಪರಿಶುದ್ಧಾತ್ಮನಿಗೆ ಅನುಗುಣವಾಗಿ, ಸಭೆಯು ದೇವರ ಯೋಜನೆಗೆ ಒಂದು ಪುರಾವಣಿಯಾಗಿ, ಒಂದು "ಕೂಡಿಸಲ್ಪಟ್ಟದ್ದು" ಆಗಿರುವದಿಲ್ಲ - ಅದು ತಾನೇ ಯೋಜನೆಯಾಗಿದೆ.

ಒಂದು ಪರ್ಯಾಯವು ಯಾವಾಗಲೂ ಎರಡನೆಯ ತರಗತಿಯದ್ದೂ, ಅತ್ಯುತ್ತಮವಾದದ್ದಕ್ಕೆ ಪ್ರತಿಯಾಗಿರುವಂಥದ್ದೂ ಆಗಿರುತ್ತದೆ, ತನ್ನ ಹೃದಯದ ಪ್ರೀತಿಯಾದ, ರಾಹೇಲಳ ಹಸ್ತವನ್ನು ಮದುವೆಯಲ್ಲಿ ಕೊಡಬೇಕೆಂದು ಕೇಳಿದ ಯಾಕೋಬನಿಗೆ, ಮೋಸದಿಂದ ಲೇಯಳು ಕೊಡಲ್ಪಟ್ಟಿದ್ದರ ಕಡೆಗೆ ನಿಮ್ಮ ಹೃದಯವು ಹೋಗುವದಿಲ್ಲವೋ (ಆದಿಕಾಂಡ 29:16-25)? ನಿಮ್ಮ ಮದುವೆಯ ದಿನದಂದು ನೀನು ಪ್ರೀತಿಸಿದ, ನಿನ್ನ ವಧುವಿಗೆ ಪರ್ಯಾಯವಾದವಳನ್ನು ಸ್ವೀಕರಿಸುವುದು ಹೇಗಿರುವುದೆಂದು ನೀನು ಕಲ್ಪಿಸಬಹುದೋ?

ನಾವು ಯಾಕೋಬನೊಂದಿಗೆ ಸಹಾನುಬೂತಿ ವ್ಯಕ್ತಪಡಿಸುತ್ತೇವೆ, ಯಾಕಂದರೆ ಯಾರೂ ನಕಲಿಯಾದದ್ದರೊಂದಿಗೆ, ಬದಲಾಗಿ ಕೊಡುವಂಥದ್ದರ ಬಗ್ಗೆ ನಿಜವಾಗಿಯೂ ತೃಪ್ತಿಗೊಳ್ಳುವದಿಲ್ಲ ಎಂಬುದನ್ನು ನಾವು ಬಲ್ಲವರಾಗಿದ್ದೇವೆ. ನಕಲಿ ಪ್ರತಿಗಿಂತ ಸಹಜವಾದ ವಸ್ತುವು ಹೆಚ್ಚು ಅಪೇಕ್ಷಿಸಲ್ಪಡುತ್ತದೆ. ಸಭೆಯು ಅಧಿಕೃತವಾದದ್ದು; ಪರ್ಯಾಯವಾದದ್ದು ಆಗಿರುವದಿಲ್ಲ.

ಸಭೆಯು ಹೊಸ ಒಡಂಬಡಿಕೆಯಲ್ಲಿ ರಾಜ್ಯದ ಪ್ರವಾದನೆಗಳ ಮಹಿಮೆಯುಳ್ಳ ನೆರವೇರಿಕೆಯಾಗಿದೆಯೆಂದು ನಮಗೆ ಹೇಳುವದರಿಂದ ಸಭೆಯ ಸೌಂದರ್ಯವನ್ನೂ ಮಹತ್ವವನ್ನೂ ದೇವರು ನಮಗೆ ತೋರಿಸುತ್ತಾನೆ, ಯೇಸುವು ಸಭೆಯನ್ನು, "ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು" (ಎಫೆಸ 5:27) ಎಂದು ಪೌಲನು ಹೇಳಿದನು.

ಸಭೆಯು ಅತ್ಯುತ್ತಮವಾದದ್ದಕ್ಕೆ ಬೆಂಬಲಿಸು ಎಂಥದ್ದಾಗಿರದೆ, ದೇವರ ಪ್ರಥಮ ಆಯ್ಕೆಯಾಗಿರುತ್ತದೆ ಎಂಬುದರ ಬಗ್ಗೆ ನೀವು ನನ್ನೊಂದಿಗೆ ಆನಂದ ಪಡುವದಿಲ್ಲವೋ? ಸಭೆಯ ಭಾಗವಾಗುವುದರೊಂದಿಗೆ, ನಾವು ದೇವರ ಬುದ್ಧಿಯುಳ್ಳ ಯೋಜನೆಯ ಮತ್ತು ಪಾಪಿ ಮಾನವನಿಗಾಗಿರುವ ದಯೆಯ ಕಾರ್ಯದ ಫಲವನ್ನು ಅನುಭವ ಭಾಗಿಗಳಾಗುತ್ತೇವೆ. ಈ ಕ್ಷಣದಲ್ಲಿ ತಡೆದು ಕೊಳ್ಳಿರಿ ಮತ್ತು ಸಭೆಯು ನಮ್ಮ ವಿಮೋಚನೆಗಾಗಿ ದೇವರ ನಿತ್ಯವಾದ ಉದ್ದೇಶವಾಗಿದೆ, ಆದರೆ ಕೇವಲ ತುಂಬುವಿಕೆಯಾಗಿರುವದಿಲ್ಲ

ಎಂಬುದಕ್ಕಾಗಿ ಕೃತಜ್ಞತೆಯ ಪ್ರಾರ್ಥನೆಯಲ್ಲಿ ದೇವರಿಗೆ ಸ್ತೋತ್ರ ಹೇಳಿರಿ.

## ಮುಕ್ತಾಯ

ಸಭೆಯು ಏನಗಿರುವದಿಲ್ಲ ಎಂಬುದನ್ನು ಗಮನಿಸುವದರಿಂದ ಹೊಸ ಒಡಂಬಡಿಕೆಯ ಸಭೆಯು ಏನಾಗಿರುತ್ತದೆ ಎಂಬುದನ್ನು ನಾವು ನೋಡುವದಿಲ್ಲವೋ? ಸಭೆಯು ಒಂದು ದೈಹಿಕ ರಚನೆಯಾಗಿರುವದಿಲ್ಲ; ಅದು ಕ್ರಿಸ್ತನ ಆತ್ಮಿಕ ದೇಹವಾಗಿರುತ್ತದೆ. ಅದು ಒಂದು ಸಮಾಜಿಕ ಕ್ಲಬ್ ಆಗಿರುವುದಿಲ್ಲ; ಅದು ನೂತನ ಜನನದಿಂದ ಪ್ರವೇಶಿಸಲ್ಪಟ್ಟ, ದೇವರ ಆತ್ಮಿಕ ಕುಟುಂಬವಾಗಿರುತ್ತದೆ. ಅದು ಒಂದು ಮಾನವ ಸೂಚನೆಯಾಗಿರುವದಿಲ್ಲ; ಅದು ಶಿಲುಬೆಯ ಮುಖಾಂತರ ದೇವರ ನಕ್ಷೆ ಮತ್ತು ಅಪೇಕ್ಷೆ ಯಾಗಿರುತ್ತದೆ. ಅದು ದೇವರಿಗಿದ್ದ ಉದ್ದೇಶಕ್ಕೆ ಒಂದು ಪರ್ಯಾಯವಾಗಿರುವದಿಲ್ಲ; ಅದು ದೇವರ ರಾಜ್ಯದ ಪ್ರವಾದನೆಗಳ ಮತ್ತು ದೇವರ ನಿತ್ಯ ಉದ್ದೇಶದ ನೆರವೇರಿ ಕೆಯಾಗಿದೆ. ಒಬ್ಬನು ಸಭೆಯನ್ನು ಪ್ರವೇಶಿಸುವಾಗ, ನಿತ್ಯವಾದ ಸಮಯಗಳಿಂದ ಇದ್ದ ದೇವರ ಸಂಪೂರ್ಣ ಯೋಜನೆಯೊಳಗೆ ಪ್ರವೇಶಿಸುತ್ತಾನೆ.

ಒಬ್ಬ ಚಿಕ್ಕ ಬಾಲಕನಿಗೆ ಅವನ ಮನೆಯನ್ನು ಸಂದರ್ಶಿಸುತ್ತಿದ್ದ ಅತಿಥಿಗಳಿಂದ ಅವನ ಹೆಸರು ಕೇಳಲ್ಪಟ್ಟಿತು. ಅವನು, "ನನ್ನ ಹೆಸರು ಕ್ವಿಟ್" ಎಂದು ಉತ್ತರ ಕೊಟ್ಟನು. ಸಂಶಯಗೊಂಡು ಅತಿಥಿಗಳು, "ನಿನ್ನ ಹೆಸರು ಕ್ವಿಟ್ ಎಂದು ನಿನಗೆ ಹೇಗೆ ಗೊತ್ತು?" ಎಂದು ಕೇಳಿದರು. ಅವನು ಮೇಲಕ್ಕೂ ನೋಡದೇ, "ಪ್ರತೀ ಸಲ ಜನರು ನನ್ನ ಕಡೆಗೆ ನೋಡುವಾಗ, ಅವರು 'ಕ್ವಿಟ್!' ಎಂದು ಹೇಳುತ್ತಾರೆ" ಎಂದು ಹೇಳಿದನು. ಆ ಚಿಕ್ಕ ಬಾಲಕನು ಸಕಾರಾತ್ಮನಾಗುವಷ್ಟರ ಮಟ್ಟಿಗೆ ತನ್ನ ಮನಸ್ಸಿನಲ್ಲಿ ಬದಲಾಗುವಷ್ಟು ಅಂಥ ಮಾತನ್ನು ಕೇಳಿದ್ದನು, ಅವನ ಹೆಸರು "ಕ್ವಿಟ್" ಎಂದಾಗಿತ್ತು.

ಸಭೆಯು ಏನಾಗಿರುವದಿಲ್ಲ ಎಂಬುದನ್ನು ಅಧ್ಯಯನ ಮಾಡುವಾಗ ನಮ್ಮ ಸಮೀಪಕ್ಕೂ ಅಂತಹದೇ ಆದ ಗಂಡಾಂತರವು ಸುಳಿಯ ಬಹುದು. ಅಂಥ ಅಧ್ಯಯನವು ಸಭೆಯನ್ನು ಕೇವಲ "ಅಲ್ಲವೆಂಬ" ಒಂದು ಬಂಡಲಿನಂತೆ ನೋಡುವುದಕ್ಕೆ ನಮ್ಮನ್ನು ನಡಿಸಬಾರದು. ಒಬ್ಬ ಕ್ರೈಸ್ತನು ತಾನು ಯಾವುದಕ್ಕೆ ವಿರುದ್ಧವಾಗಿದ್ದನೋ ಅಷ್ಟನ್ನು ಮಾತ್ರವೇ ತಿಳಿದುಕೊಂಡು, ಎರಡು ಕಾಲುಗಳ ಮೇಲೆ ಸುತ್ತಲೂ ನಡೆಯುವ ಕೇವಲ "ವಿರೋಧಿಯಾಗಿ" ಇರಬಾರದು. ನಕಾರಾತ್ಮಕಗಳು ಸಕಾರಾತ್ಮಕವಾದವುಗಳನ್ನು ಒತ್ತಿ ಹೇಳುವದಕ್ಕಾಗಿ ಇರುತ್ತವೆ, ಸಭೆಯು ಏನಾಗಿರುವದಿಲ್ಲ ಎಂಬುದನ್ನು ನೋಡುವದರಿಂದ ಸಭೆಯು ಏನಾಗಿದೆ ಎಂಬುದನ್ನು ತೀರ್ಮಾನಿಸಲು ಮತ್ತು ಸಭೆಯಾಗಿರಲು ನಮಗೆ ಸಹಾಯವಾಗುತ್ತದೆ.

ಸಭೆಯಾಗಿ, ನಾವು ಶಿಷ್ಯರಂತೆ, ಸೇವಕರಂತೆ ಮತ್ತು ಅನುಯಾಯಿಗಳಂತೆ ಕ್ರಿಸ್ತನಿಗೆ ಒಳಪಟ್ಟಿರುತ್ತೇವೆ, ಆತನ ಚಿತ್ತಕ್ಕೆ ನಂಬಿಗಸ್ಥಿಕೆಯ ಒಪ್ಪಿಸಿಕೊಡುವಿಕೆಯ ಮುಖಾಂತರ ಆತನ ಒಡೆತನದ ಅಧೀನತೆಯಲ್ಲಿ ಜೀವಿಸುತ್ತೇವೆ. ವಿಧೇಯತೆಯ ವಿಶ್ವಾಸವನ್ನು ದೇವರಿಗೆ, ಕ್ರಿಸ್ತನಿಗೆ ಮತ್ತು ಪರಿಶುದ್ಧಾತ್ಮನಿಗೆ ನಮ್ಮ ಅನುದಿನದ ಉತ್ತರವನ್ನಾಗಿ ಮಾಡುತ್ತೇವೆ. ಸಭೆಯನ್ನು ನಾವು ದೇವರ ರಾಜ್ಯದ, ಕ್ರಿಸ್ತನ ದೇಹದ, ಇಲ್ಲವೇ ದೇವರ ಕುಟುಂಬದ ದೃಷ್ಟಿಕೋನದಿಂದ ನೋಡಿದರೂ ಕ್ರೈಸ್ತನ ಉತ್ತರವು ಯಾವಾಗಲೂ ವಿಧೇಯವಾಗುವ ನಂಬಿಕೆಯಾಗಿದೆ. ಆತನ ವಾಕ್ಯದ ಸಾಕ್ಷಿಯ ಮುಖಾಂತರ ಮತ್ತು ಜೀವನದ ಸಾಕ್ಷಿಯ ಮುಖಾಂತರ, ಪ್ರತಿಯೊಬ್ಬ ಪಾಪಿಯ ಅತಿದೊಡ್ಡ ಅಗತ್ಯತೆಯು, ಭರವಸೆಯ ನಂಬಿಕೆಯಿಂದ ಕ್ರಿಸ್ತನ ಸಭೆಯನ್ನು ಪ್ರವೇ ಶಿಸುವುದು ಮತ್ತು ಆತನು ನಮ್ಮನ್ನು ಮನೆಗೆ ಕರೆಯುವವರೆಗೆ ಇಲ್ಲವೇ ನಮ್ಮನ್ನು

ತೆಗೆದುಕೊಂಡು ಹೋಗಲು ಬರುವವರೆಗೆ ಕ್ರಿಸ್ತನ ಮುಂದೆ ನಂಬಿಕೆಯಿಂದ ನಡೆಯುವುದು ಆಗಿದೆ.

ರಾಹೇಲಳನ್ನು ನೀವು ಮದುವೆಯಾಗಬಹುದಾಗಿರುವಾಗ ಲೇಯಳಿಗಾಗಿ ಒಪ್ಪಂದ ಮಾಡಿಕೊಳ್ಳಬೇಡಿರಿ! ನೀನು ನಿಜವಾಗಿಯೂ ಯೇಸುವು ಸ್ಥಾಪಿಸಿದ ಸಭೆಯಾಗಬಹುದು!

---

ಟಿಪ್ಪಣಿ

[1]"ಸಭೆಯ" ಮೇಲಿನ ಸರಣಿಯಲ್ಲಿ ಈ ಅಧ್ಯಯನವು ಮೂರನೆಯ ಪುಸ್ತಕವಾಗಿದೆ. ಈ ಸರಣಿಯಲ್ಲಿಯ ಇತರ ಎರಡು ಪುಸ್ತಕಗಳು, ವಾಟ್ ಈಜ್ "*ದ ಚರ್ಚ್*"? ಮತ್ತು ಗಾಡ್ಸ್ ಡಿಜೈನ್ ಫಾರ್ "*ದ ಚರ್ಚ್*" ಎಂಬವುಗಳು. ಆರ್ಕನ್ಸಾಸ್‌ದ ಸಿಯರ್ಸಿಯಲ್ಲಿ ಇವೆರಡು ಗ್ರಂಥಕರ್ತನಿಂದ ಪ್ರಕಟಿಸಲ್ಪಟ್ಟಿವೆ. ಹೊಸ ಒಡಂಬಡಿಕೆಯ ಸಭೆಯ ಹೆಚ್ಚಿನ ವಿಚಾರಕ್ಕಾಗಿ ಈ ಎರಡು ಪುಸ್ತಕಗಳು ಶಿಫಾರಸು ಮಾಡಲ್ಪಟ್ಟಿವೆ.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸಭೆಯು ಏನಾಗಿರುವದಿಲ್ಲ ಎಂಬುದನ್ನು ನೋಡುವುದು ಯಾಕೆ ಸಹಾಯಕರವಾದದ್ದಾಗಿದೆ?
2. ಪರಿಶುದ್ಧ ಬರಹಗಳಲ್ಲಿ ಪ್ರಸ್ತಾಪಿಸಲ್ಪಟ್ಟಂತೆ ಸಭೆಯ ಸಂಕ್ಷಿಪ್ತ ನಿರೂಪಣೆಯನ್ನು ಕೊಡಿರಿ.
3. ಸಭೆಯು ಆರಾಧನೆಯ ಭೌತಿಕ ಸ್ಥಳಕ್ಕೆ ಯಾವ ಸಂಬಂಧವನ್ನು ಕಾದುಕೊಂಡಿರುತ್ತದೆ?
4. ಸಭೆಯು ಭೌತಿಕ ಸ್ಥಳವಾಗಿರದೇ ಇರುವದರಿಂದ ನೀವು ಯಾವ ಲಾಭಗಳನ್ನು ನೋಡುವಿರಿ?
5. ಸಭೆಯು ಇತರರೊಂದಿಗಿನ ಅನ್ಯೋನ್ಯತೆಗಿಂತ ಹೇಗೆ ಹೆಚ್ಚಾದದ್ದಾಗಿರುವುದು?
6. ಒಂದು ಆತ್ಮಿಕ ಕುಟುಂಬದ ಭಾಗವಾಗಿರುವುದು ಎಂಬುದರ ಅರ್ಥವೇನು?
7. ದೇವರ ಕುಟುಂಬದಲ್ಲಿ ಹೇಗೆ ಪ್ರವೇಶಿಸಬಹುದು?
8. ಸಭೆಯು ದೇವರ ವಿಚಾರವಾಗಿದೆ ಆದರೆ ಮನುಷ್ಯನದಲ್ಲ ಎಂಬುದನ್ನು ಪರಿಶುದ್ಧ ಬರಹಗಳಿಂದ ಸಿದ್ಧಪಡಿಸಿ ತೋರಿಸಿರಿ.
9. ಸಭೆಯು ಬದಲಾಗಿ ಇಡಲ್ಪಟ್ಟದ್ದಲ್ಲ, ಆದರೆ ಪ್ರಾರಂಭದಿಂದಲೇ ದೇವರ ಉದ್ದೇಶಪೂರಿತ ಯೋಜನೆಯಾಗಿದೆ ಎಂಬುದನ್ನು ಪರಿಶುದ್ಧಬರಹಗಳಿಂದ ಸಿದ್ಧಪಡಿಸಿ ತೋರಿಸಿರಿ.
10. ಸಭೆಯು ಪ್ರವಾದನೆಯ ನೆರವೇರಿಕೆಯಾಗಿದೆ ಎಂಬದನ್ನು ಸೂಚಿಸುವ ಪರಿಶುದ್ಧ ಬರಹಗಳ ವಾಕ್ಯಭಾಗಗಳನ್ನು ಹೇಳಿರಿ.
11. ವಿಧೇಯ ವಿಶ್ವಾಸ ಯಾವುದು?
12. ಸುವಾರ್ತೆಗೆ ನಮ್ಮ ಅನುದಿನದ ಪ್ರತ್ಯುತ್ತರ ಯಾವುದು ಇರಬೇಕು?

© 2009 Truth for Today